# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 154, ಬಸವನಗುಡಿ ಬೆಂಗಳೂರು.

ಸಂಖ್ಯೆ: ಸ.ಅ/ವಾ-154/2022-23 ದಿನಾಂಕ: 10-01-2023

### ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ: 21-09-2020ರ ಆದೇಶದಂತೆ ದಿನಾಂಕ: 07-01-2023 ಶನಿವಾರ ವಾರ್ಡ್ ಸಂಖ್ಯೆ: 210, ಬಸವನಗುಡಿ ವಾರ್ಡ್ ಕಛೇರಿಯಲ್ಲಿ ನಡೆದ ಜನವರಿ ತಿಂಗಳ 1ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸ್ಥಳ: ಬಿಬಿಎಂಪಿ ವಾರ್ಡ್ ಕಛೇರಿ, ಬಸವನಗುಡಿ, ಎನ್.ಆರ್. ಕಾಲೋನಿ ಹತ್ತಿರ
ಸಮಯ: ಬೆಳಿಗ್ಗೆ 11.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಟಿ. ಕೃಷ್ಣಮೂರ್ತಿ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-154, ಬಸವನಗುಡಿ |
| 2 | ಶ್ರೀಮತಿ. ಭಾಗ್ಯಮ್ಮ | ಬಸವನಗುಡಿ ಎ.ಎಸ್.ಐ |
| 3 | ಶ್ರೀಮತಿ. ಜೆ. ಶ್ರೀಲತಾ | ಬೀದಿ ದೀಪ ನಿರ್ವಹಣೆ |
| 4 | ಶ್ರೀ. ಬಾಲಕೃಷ್ಣ. ಎನ್. | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ. ಮುನಿರಾಜು | ಬೆಸ್ಕಾಂ. ಕಿರಿಯ ಅಭಿಯಂತರರು |
| 6 | ಶ್ರೀ.ಆರ್. ಶ್ರೀನಿವಾಸ ಪ್ರಸಾದ್ | ಸಾರ್ವಜನಿಕರು |
| 7 | ಶ್ರೀ.ಬಿ.ಆರ್. ನಾರಾಯಣಪ್ರಸಾದ್ | ಸಾರ್ವಜನಿಕರು |
| 8 | ಶ್ರೀ. ಶ್ರೀಧರನ್ | ಸಾರ್ವಜನಿಕರು |
| 9 | ಶ್ರೀ. ಅಕ್ಷಯ್ ಜಿ ಕುಂಬ್ಳೆ | ಸಾರ್ವಜನಿಕರು |
| 10 | ಶ್ರೀ. ಹೆಚ್. ಪ್ರಕಾಶ್ ಹತ್ವಾರ್ | ಸಾರ್ವಜನಿಕರು |
| 11 | ಶ್ರೀ. ಕಾರ್ತಿಕ್. ಎನ್ | ಸಾರ್ವಜನಿಕರು |
| 12 | ಶ್ರೀ. ಸತ್ಯೇಂದ್ರ ವಿಠ್ಠಲ್. ಬಿ.ಆರ್ | ಸಾರ್ವಜನಿಕರು |
| 13 | ಶ್ರೀಮತಿ. ಸತ್ಯಲಕ್ಷ್ಮಿ ರಾವ್ | ಸಾರ್ವಜನಿಕರು |
| 14 | ಶ್ರೀ. ಗುರು ಪ್ರಸಾದ್. ಆರ್.ಕೆ | ಸಾರ್ವಜನಿಕರು |
| 15 | ಹೆರಿಟೇಜ್ ಬಸವನಗುಡಿ ರೆಸಿಡೆನ್ಸಿ ವೆಲ್‌ಫೇರ್ | ಸಾರ್ವಜನಿಕರು |

ಕಾರ್ಯದರ್ಶಿ ಮತ್ತು ಸಂಚಾಲಕರಾದ ಶ್ರೀ. ಟಿ. ಕೃಷ್ಣಮೂರ್ತಿ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸ್ವಾಗತ ಕೋರುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಗೆ ಬೆಸ್ಕಾಂ, ಘನತ್ಯಾಜ್ಯ ವಿಭಾಗ, ಬೀದಿ ದೀಪಗಳ ನಿರ್ವಹಣಾ ಗುತ್ತಿಗೆದಾರರು ಹಾಗೂ ಸಂಚಾರಿ ಪೋಲೀಸ್ ಅಧಿಕಾರಿಗಳು ಸಭೆಗೆ ಹಾಜರಾಗಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಬಸವನಗುಡಿಯಲ್ಲಿನ ಪಾಮಡಿ ಜ್ಯುವೆಲರ್ಸ್, ಸಿಂಡಿಕೇಟ್ ಬ್ಯಾಂಕ್ ಹಾಗೂ ಬೈಟು ಕಾಫಿ ಹೋಟೆಲ್ ಮುಂಭಾಗದಲ್ಲಿನ ಪಾರ್ಕಿಂಗ್ ಹಾಗೂ ಜನದಟ್ಟಣೆ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಂಚಾರಿ ಪೋಲೀಸ್ ಅಧಿಕಾರಿಗಳಿಗೆ ಸರಿಪಡಿಸಲು ತಿಳಿಸಿರುತ್ತಾರೆ ಹಾಗೂ ಗಾಂಧಿಬಜಾರ್ ಮುಖ್ಯರಸ್ತೆಯ ದುರಸ್ಥಿ ಕಾರ್ಯ ನಡೆಯುತ್ತಿರುವುದರಿಂದ ಬಸವನಗುಡಿ ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದು ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಲು ಸಭೆಯಲ್ಲಿ ಕೋರಿರುತ್ತಾರೆ.



Scanned with CamScanner

ಈ ಬಗ್ಗೆ ಗಮನಹರಿಸುವುದಾಗಿ ಸಭೆಯಲ್ಲಿ ಹಾಜರಿದ್ದ ಪೋಲೀಸ್ ಅಧಿಕಾರಿಗಳು ತಿಳಿಸಿರುತ್ತಾರೆ. ಪ್ರತಿ ತಿಂಗಳ 4ನೇ ಶನಿವಾರ ಸಂಚಾರಿ ಪೋಲೀಸ್ ವತಿಯಿಂದ ಪೋಲೀಸ್ ಠಾಣೆಗಳಲ್ಲಿ ಸಭೆಗಳನ್ನು ನಡೆಸಲಾಗುತ್ತಿದ್ದು ಸಭೆಯಲ್ಲಿ ಭಾಗವಹಿಸಲು ಕೋರಿರುತ್ತಾರೆ.

ಪೂರ್ವ ಆಂಜನೇಯ ರಸ್ತೆಯ ಬದಿಯಲ್ಲಿನ ಚರಂಡಿ ಕಲ್ಲುಗಳು ಅಲುಗಾಡುತ್ತಿರುತ್ತವೆ ಹಾಗೂ ಪೋಲೀಸ್ ಠಾಣಾ ರಸ್ತೆಯ ಪಾದಚಾರಿ ಮಾರ್ಗವನ್ನು ದುರಸ್ಥಿಗೊಳಿಸಲು ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ವಾರ್ಡ್‌ನ ವಾರ್ಷಿಕ ಕಾರ್ಯಕ್ರಮ ಪಟ್ಟಿಯಲ್ಲಿ ಕಾಮಗಾರಿಯನ್ನು ಅಳವಡಿಸಿಕೊಂಡಿದ್ದು ಟೆಂಡರ್ ಕರೆದು ಕಾಮಗಾರಿಯನ್ನು ಕೈಗೊಳ್ಳುವುದಾಗಿ ಅಭಿಯಂತರರು ಸಭೆಗೆ ತಿಳಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿನ ಬೃಂದಾವನ ಸ್ಟೋರ್, ಮಲ್ಲಿಕಾರ್ಜುನ ದೇವಸ್ಥಾನ ರಸ್ತೆ ಹಾಗೂ ಇತರೆ ರಸ್ತೆಗಳಲ್ಲಿನ ಹಳೆಯ ಮರಗಳನ್ನು ತೆರವುಗೊಳಿಸಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ಅರಣ್ಯ ಅಧಿಕಾರಿಗಳಿಗೆ ತಿಳಿಸಿ ಕ್ರಮವಹಿಸಲು ಸದರಿಯವರಿಗೆ ಸೂಚಿಸುವುದಾಗಿ ಸಭೆಯಲ್ಲಿ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಜಿಯೋ ಕೇಬಲ್ ಅಳವಡಿಕೆ ಸಮಸ್ಯೆ ಬಗ್ಗೆ ಹಾಗೂ ಅನಧಿಕೃತವಾಗಿ ಅಗೆದಿರುವ ಬಗ್ಗೆ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಅಕ್ಷಯ್ ರವರು ಕೋರಿರುತ್ತಾರೆ. ಈ ಬಗ್ಗೆ ಕ್ರಮಕೈಗೊಂಡು ಸದರಿಯವರು ಹೆಚ್ಚುವರಿಯಾಗಿ ಅಳವಡಿಸಿರುವ ಕೇಬಲ್‌ನ ವರದಿಯನ್ನು ಕಾರ್ಯಪಾಲಕ ಅಭಿಯಂತರರು, ಓ.ಎಫ್.ಸಿ ಕೋಶ ರವರಿಗೆ ನೀಡಿದ್ದು, ಜಿಯೋ ಕೇಬಲ್ ರವರಿಗೆ ದಂಡವನ್ನು ಸಹ ವಿಧಿಸಿ ಪತ್ರ ಬರೆಯಲಾಗಿರುತ್ತದೆ.

ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವ ಬಗ್ಗೆ ಸಾರ್ವಜನಿಕರು ಗುತ್ತಿಗೆದಾರರನ್ನು ಪ್ರಶಂಸಿಸಿರುತ್ತಾರೆ.

ಎನ್.ಆರ್. ಕಾಲೋನಿ 5ನೇ ಅಡ್ಡರಸ್ತೆಯಲ್ಲಿ ಮರ ಕತ್ತರಿಸಿರುವ ಬಗ್ಗೆ ಕ್ರಮವಹಿಸಲು ಸಾರ್ವಜನಿಕರು ಸಭೆಗೆ ತಿಳಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿ ಕಸ ಮತ್ತು ತ್ಯಾಜ್ಯವನ್ನು ಸಮರ್ಪಕ ರೀತಿಯಲ್ಲಿ ವಿಂಗಡಣೆ ಮಾಡಿ ನಿರ್ವಹಣೆ ಮಾಡಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸಾರ್ವಜನಿಕರು ಕೋರಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ವಿಂಗಡಿಸಿ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ಸಭೆಯಲ್ಲಿ ಸಾರ್ವಜನಿಕರು ಸಲಹೆ ನೀಡಿರುತ್ತಾರೆ.

ಡಿ.ವಿ.ಜಿ ರಸ್ತೆಯಲ್ಲಿನ ಅಬಲಾಶ್ರಮ ಸಂಸ್ಥೆಯವರು ತಮ್ಮ ಕಟ್ಟಡದ ನೆಲಮಹಡಿಯಲ್ಲಿ ಅನಧಿಕೃತವಾಗಿ ವಾಹನ ನಿಲುಗಡೆ ಮಾಡುತ್ತಿದ್ದು ಬೇರೆಯ ಚಟುವಟಿಕೆಗಳಿಗೆ ಅವಕಾಶವಾಗುವುದರಿಂದ ಇದನ್ನು ತಡೆಗಟ್ಟಲು ಹಾಗೂ ಸದರಿಯವರಿಗೆ ಈ ಬಗ್ಗೆ ನೋಟೀಸ್ ನೀಡಲು ಸಾರ್ವಜನಿಕರು ಸಭೆಯಲ್ಲಿ ಕೇಳಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಕಾರ್ಯದರ್ಶಿಗಳು ರವರು ಈ ವಿಷಯಗಳ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ, ವಂದನೆಗಳೊಂದಿಗೆ ಈ ಸಭೆಯನ್ನು ಕಾರ್ಯದರ್ಶಿಗಳು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 210, ಬಸವನಗುಡಿ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 210, ಬಸವನಗುಡಿ



Scanned with CamScanner